**ಓಎಸ್ ನಂಃ 67/2015**
**ಪಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 28-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ವಿ.ಎಮ್.ಎ. ವಕೀಲರಿಂದ</u>

ನಿಮ್ಮ ದಾವೆಯಲ್ಲಿ ಅಥವಾ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಯು ನಿಮಗೆ ಹೇಗೆ ಬಂತು ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ನಮೂದು ಮಾಡಿದ್ದೇನೆ ಸದರಿ ಹೊಲವು ಅನುಸುಬಾಯಿಯವರಿಂದ ನನಗೆ ಬಂದಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೊದಲು ಅನುಸುಬಾಯಿಗೆ ಸಂಬಂಧಪಟ್ಟಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಮೂಲ ದಾವೆ ನಂಬರ್ 228/2011 ಈ ದಾವೆಯ ಆದೇಶದ ಪ್ರಕಾರ ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಬಂದಿದೆ ನಾನು ಸದರಿ ಆದೇಶವನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಮೂಲ ದಾವೆ ನಂಬರ್ 228/2011 ರಲ್ಲಿ ದಾವಾ ಆಸ್ತಿಯು ನಿಮಗೆ ಸೇರಿತ್ತು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ದಾವೆಯಲ್ಲಿ ಪಡಿಸಿದ್ದೆವು ಎಂದು ನುಡಿಯುತ್ತಾರೆ. ನಾವು ಸದರಿ ದಾವೆಯಲ್ಲಿ ಸುಮಾರು 4-5 ವರ್ಷಗಳ ದಾವಾ ಆಸ್ತಿಯ ಪಹಣಿ ಪತ್ರಿಕೆಗನ್ನು ಹಾಜರುಪಡಿಸಿದ್ದೆವು. ನಿಪಿ-4 ಪಹಣಿ ಪತ್ರಿಕೆಯನ್ನು ನೀವು ಹಾಜರುಪಡಿಸಿದ್ದೀರಿ ಅದರ ಪ್ರಕಾರ ಸರ್ವೆ ನಂಬರ್ 100/1ರ ಮಾಲಿಕತ್ವ ಕರ್ನಾಟಕ ಸರಕಾರಕ್ಕೆ ಇದೆ ಎಂದರೆ ಸಾಕ್ಷಿ ನನ್ನ ಆಸ್ತಿಯು ಸಹ ಅದರಲ್ಲಿದೆ ಎಂದು ನುಡಿಯುತ್ತಾರೆ. ನಿಪಿ-8 ರ ಪ್ರಕಾರ ನಿಮ್ಮ ಕುಟುಂಬದವರ ಹೆಸರುಗಳು ಸರ್ವೆ ನಂಬರ್ 100 ಕ್ಕೆ ತಪ್ಪಾಗಿ ನಮೂದಾಗಿದ್ದ ಕಾರಣ ತಹಸೀಲ್ದಾರ್ ಚಿತ್ತಾಪುರ್ ರವರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಿಮ್ಮ ಕುಟುಂಬದವರ ಹೆಸರುಗಳನ್ನು ಸರ್ವೆ ನಂಬರ್ 100/1ರ ಪಹಣಿ ಪತ್ರಿಕೆಯಿಂದ ತೆಗೆಯಬೇಕು ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ಸದರಿ ಆದೇಶದ ಪ್ರಕಾರ ಸರಕಾರದವರು ನಿಪಿ-4ರಲ್ಲಿ ಕಾಣುವಂತೆ ತಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-8 ಆದೇಶದ ವಿರುದ್ಧ ನಾವು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ.

1963-’64 ರಿಂದ 1997-’98 ರವರೆಗಿನ ಸರ್ವೆ ನಂಬರ್ 100 ರ ಪಹಣಿ ಪತ್ರಿಕೆಯಲ್ಲಿ ಜಾಗವು ಸರಕಾರದ ಜಾಗ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನೀವು

ಸರಕಾರಕ್ಕೆ ದಾವಾ ಆಸ್ತಿಯ ಕುರಿತು ಏನಾದರೂ ಹಣ ಕಟ್ಟಿದ್ದೀರಾ ಎಂದರೆ ಸಾಕ್ಷಿ ಕಟ್ಟಿಲ್ಲ ಎಂದು ನುಡಿದು ಪ್ರತಿವಾದಿ ಮತ್ತು ತಹಸೀಲ್ದಾರ್ ರವರು ಸೇರಿ ತಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅನುಸೂಯ ಮತ್ತು ಸರೂಬಾಯಿಯವರು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದೆ ತಮ್ಮ ಹೆಸರುಗಳನ್ನು ಅನಧಿಕೃತವಾಗಿ ಕಂದಾಯ ದಾಖಲೆಗಳಲ್ಲಿ ನಮೂದು ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆದ ಕಾರಣ ನಿಪಿ-8ರ ಪ್ರಕಾರ ಆದೇಶ ಮಾಡಿ ನಿಮ್ಮ ಹೆಸರುಗಳನ್ನು ಸರ್ವೆ ನಂಬರ್ 100 ರ ಕಂದಾಯ ದಾಖಲೆಗಳಿಂದ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-8 ಆದೇಶದ ನಂತರ ನೀವು ಈಗ ದಾವಾ ಆಸ್ತಿಯ ಕಬ್ಜಾದಲ್ಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸುಮಾರು 12 ವರ್ಷಗಳ ಮೊದಲು ಪ್ರತಿವಾದಿಯವರು ನಮ್ಮನ್ನು ದಾವಾ ಆಸ್ತಿಯಿಂದ ಹೊರಗೆ ಹಾಕಿದ್ದಾರೆಂದು ನುಡಿಯುತ್ತಾರೆ.

ಸರಕಾರದವರು ಪ್ರತಿವಾದಿಗೆ ದಾವಾ ಆಸ್ತಿಯನ್ನು 30 ವರ್ಷದ ಲೀಸ್ ಮೂಲಕ ಕೊಟ್ಟಿದ್ದಾರೆ ಎಂದರೆ ಕೊಟ್ಟಿರಬಹುದು. ನೀವು ಈ ದಾವೆಯಲ್ಲಿ ಸರಕಾರವನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಿಮಗಾಗಲೀ ನಿಮ್ಮ ಕುಟುಂಬದವರಗಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ, ನೀವು ಪಹಣಿ ಪತ್ರಿಕೆಗಳಲ್ಲಿ ತಪ್ಪಾಗಿ ನಿಮ್ಮ ಹೆಸರುಗಳನ್ನು ನಮೂದು ಮಾಡಿ ಮೂಲು ದಾವೆ ನಂಬರ್ 228/2011 ಮತ್ತು ಈ ದಾವೆಯನ್ನು ತಪ್ಪಾಗಿ ಹಾಕಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯವರು ಸರಕಾರದಿಂದ ಲೀಸ್ ಡೀಡನ್ನು ಪಡೆದು ಲೀಸ್ ಡೀಡ್ ಪ್ರಕಾರ ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ನೀವು ದಾಖಲೆಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಯವರಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.**